KARNATAKA NURSING & PARAMEDICAL SCIENCES EDUCATION (REGULATION) AUTHORITY
ಕರ್ನಾಟಕ ನರ್ಸಿಂಗ್ ಹಾಗೂ ಅರೆ ವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ

PARA MEDICAL BOARD

# 40/20A, Lakshmi Complex, First Floor, Opp. Vani Vilas Hospital, Fort, Bengaluru-560002
**Ph No**: 080-26702159 **Email**: pmboffice97@gmail.com / pmbexamination@gmail.com

PMB/ 08[Part-I] /2022-23 Date: 12.06.2024

## 2024-25 ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಪ್ರಕಟಣೆ

2024-25 ನೇ ಶೈಕ್ಷಣಿಕ ಸಾಲಿನ ಈ ಕೆಳಕಂಡ ಅರೆ ವೈದ್ಯಕೀಯ ಡಿಪ್ಲೋಮ ಕೋರ್ಸ್‌ಗಿಳಿಗೆ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಇತರೆ ಸರ್ಕಾರಿ ಆಸ್ಪತ್ರೆಗಳು ಹಾಗೂ ರಾಜ್ಯದಲ್ಲಿನ ವಿವಿಧ ಖಾಸಗಿ ಪ್ಯಾರಾ ಮೆಡಿಕಲ್ ಸಂಸ್ಥೆಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳಿಗೆ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ | ಕೋರ್ಸ್‌ನ ಹೆಸರು |
|---|---|
| 01 | ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಜಿ(ಡಿ.ಎಂ.ಎಲ್.ಟಿ) |
| 02 | ಡಿಪ್ಲೋಮಾ ಇನ್ ಮೆಡಿಕಲ್ ಇಮೇಜಿಂಗ್ ಟೆಕ್ನಾಲಜಿ(ಡಿ.ಎಂ.ಐ.ಟಿ) |
| 03 | ಡಿಪ್ಲೋಮಾ ಇನ್ ಹೆಲ್ತ್ ಇನ್ಸ್‌ಪೆಕ್ಟರ್ (ಡಿ.ಹೆಚ್.ಐ) |
| 04 | ಡಿಪ್ಲೋಮಾ ಇನ್ ಮೆಡಿಕಲ್ ರೆಕಾರ್ಡ್ಸ್ ಟೆಕ್ನಾಲಜಿ(ಡಿ.ಎಂ.ಅರ್.ಟಿ) |
| 05 | ಡಿಪ್ಲೋಮಾ ಇನ್ ಡಯಾಲಿಸಿಸ್ ಟೆಕ್ನಾಲಜಿ(ಡಿ.ಡಿ.ಟಿ) |
| 06 | ಡಿಪ್ಲೋಮಾ ಇನ್ ಆಪರೇಷನ್ ಥಿಯೇಟರ್ ಮತ್ತು ಅನಸ್ಥೇಶಿಯಾ ಟೆಕ್ನಾಲಜಿ |
| 07 | ಡಿಪ್ಲೋಮಾ ಇನ್ ಆಪ್ಟಾಲ್ಮಿಕ್ ಟೆಕ್ನಾಲಜಿ(ಡಿ.ಓ.ಟಿ) |
| 08 | ಡಿಪ್ಲೋಮಾ ಇನ್ ಡೆಂಟಲ್ ಮೆಕ್ಯಾನಿಕ್(ಡಿ.ಡಿ.ಎಂ) |
| 09 | ಡಿಪ್ಲೋಮಾ ಇನ್ ಡೆಂಟಲ್ ಹೈಜೀನ್(ಡಿ.ಡಿ.ಹೆಚ್) |

**ಕನಿಷ್ಠ ವಿದ್ಯಾರ್ಹತೆ:**

| ಕೋರ್ಸ್‌ಗಳ ಹೆಸರು | ಅರ್ಹತಾ ವಿದ್ಯಾರ್ಹತೆ |
|---|---|
| **ಡಿ.ಎಂ.ಎಲ್.ಟಿ, ಡಿ.ಎಂ.ಐ.ಟಿ, ಡಿ.ಹೆಚ್.ಐ, ಡಿ.ಎಂ.ಅರ್.ಟಿ, ಡಿ.ಡಿ.ಟಿ, ಡಿ.ಓ.ಟಿ & ಎ.ಟಿ, ಡಿ.ಓ.ಟಿ, ಡಿ.ಡಿ.ಎಂ, ಡಿ.ಡಿ.ಹೆಚ್** | ಎಸ್.ಎಸ್.ಎಲ್.ಸಿ / ಪಿ.ಯು.ಸಿ ವಿಜ್ಞಾನ (ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ) |
| **ಡಿ.ಎಂ.ಅರ್.ಟಿ** | ಎಸ್.ಎಸ್.ಎಲ್.ಸಿ / ಪಿ.ಯು.ಸಿ (PCMC, PCME), ಕಾಮರ್ಸ್, ಆರ್ಟ್ಸ್) ಅಥವಾ ತತ್ಸಮಾನ ವಿದ್ಯಾರ್ಹತೆ |

ಅರ್ಜಿದಾರರು 1 ರಿಂದ 10ನೇ ತರಗತಿ ಅಥವಾ ಪಿಯುಸಿಯವರೆಗೆ ಕನಿಷ್ಠ 07 ವರ್ಷಗಳು ಕರ್ನಾಟಕದಲ್ಲಿ ವಿದ್ಯಾಭ್ಯಾಸ ಮಾಡಿರಬೇಕು. ಇದಕ್ಕೆ ಸಂಬಂಧಿಸಿದ ದೃಢೀಕರಣ ಪ್ರತಿಯನ್ನು ಅರ್ಜಿಯೊಂದಿಗೆ ಸಲ್ಲಿಸುವುದು.

**ಕೋರ್ಸಿನ ಅವಧಿ:** ಪಿಯುಸಿ ಅಭ್ಯರ್ಥಿಗಳಿಗೆ 2 ವರ್ಷಗಳು + 3 ತಿಂಗಳು ಇಂಟರ್ನ್‌ಶಿಪ್ ಮತ್ತು ಎಸ್.ಎಸ್.ಎಲ್.ಸಿ ಅಭ್ಯರ್ಥಿಗಳಿಗೆ 3 ವರ್ಷಗಳು + 3 ತಿಂಗಳ ಇಂಟರ್ನ್‌ಶಿಪ್.

**ವಯೋಮಿತಿ :** ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಗರಿಷ್ಠ 35 ವರ್ಷಗಳು, ಪ.ಜಾ/ಪ.ಪಂ ಹಾಗೂ ಸೇವಾನಿರತ ಅಭ್ಯರ್ಥಿಗಳಿಗೆ 40 ವರ್ಷಗಳು ಮೀರಿರಬಾರದು.

**ಅರ್ಜಿ ನಮೂನೆಗಳು:** ಮಂಡಳಿಯ ಜಾಲತಾಣದಲ್ಲಿ ಲಭ್ಯವಿದ್ದು ಎಲ್ಲಾ ವಿದ್ಯಾರ್ಥಿಗಳು ಆನ್-ಲೈನ್ ಮೂಲಕ ಅರ್ಜಿಯನ್ನು ತುಂಬಬೇಕಾಗಿರುತ್ತದೆ. ಅರ್ಜಿಯ ಜೊತೆ ವ್ಯಾಸಂಗ ಪ್ರಮಾಣ ಪತ್ರ ಮತ್ತು ಇತರೆ ದಾಖಲೆಗಳ ದೃಡೀಕೃತ ಪ್ರತಿಗಳನ್ನು ಕಡ್ಡಾಯವಾಗಿ ಅಪ್‌ಲೋಡ್ ಮಾಡಬೇಕು.

**ಅರ್ಜಿ ಶುಲ್ಕ:** ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ರೂ.400/– ಪರಿಶಿಷ್ಟ ಜಾತಿ/ಪಂಗಡ/ಪ್ರವರ್ಗ–1 ರ ಅಭ್ಯರ್ಥಿಗಳಿಗೆ ರೂ.250/– ಅರ್ಜಿ ಶುಲ್ಕವನ್ನು ಕಡ್ಡಾಯವಾಗಿ ಆನ್‌ಲೈನ್ ಮುಖಾಂತರವೇ ಡೆಬಿಟ್/ಕ್ರೆಡಿಟ್ ಕಾರ್ಡ್/ನೆಟ್ ಬ್ಯಾಂಕಿಂಗ್ ಮೂಲಕ ಮಾತ್ರ ಪಾವತಿಸುವುದು

**ಅರ್ಜಿ ಸಲ್ಲಿಸುವ ದಿನಾಂಕ:** ದಿನಾಂಕ: 13.06.2024 ರಿಂದ 12.07.2024 ರವರೆಗೆ ಅರ್ಜಿಯು ಮಂಡಳಿಯ ಜಾಲತಾಣದಲ್ಲಿ ಲಭ್ಯವಿರುತ್ತದೆ. 12.07.2024 ರನಂತರ ಯಾವುದೇ ಕಾರಣಕ್ಕೂ ಆಫ್-ಲೈನ್ ಮೂಲಕ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**ಅಭ್ಯರ್ಥಿಗಳ ಆಯ್ಕೆ:** ಅಭ್ಯರ್ಥಿಗಳನ್ನು ಅವರ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳ ಮತ್ತು ಪ್ರವರ್ಗಗಳ ಆಧಾರದ ಮೇರೆಗೆ ಆಯ್ಕೆ ಮಾಡಲಾಗುವುದು, ಕೌನ್ಸಿಲಿಂಗ್ ನಡೆಯುವ ದಿನಾಂಕದ ಬಗ್ಗೆ ಅಭ್ಯರ್ಥಿಗಳಿಗೆ ಅರ್ಜಿಯಲ್ಲಿ ನಮೂದಿಸಿದ ಮೊಬೈಲ್ ಸಂಖ್ಯೆಗೆ ಸೂಚನಾ ಸಂದೇಶವನ್ನು ಕಳುಹಿಸಲಾಗುವುದು. ಕೌನ್ಸಿಲಿಂಗ್‌ಗೆ ಹಾಜರಾಗುವ ಸಮಯದಲ್ಲಿ ಎಲ್ಲಾ ದಾಖಲೆಗಳ ಮೂಲ ಪ್ರಮಾಣಪತ್ರಗಳನ್ನು ಸಲ್ಲಿಸುವುದು. ತಪ್ಪಿದಲ್ಲಿ ಕೌನ್ಸಿಲಿಂಗ್‌ಗೆ ಅವಕಾಶ ನೀಡಲಾಗುವುದಿಲ್ಲ. ಆನ್‌ಲೈನ್ ಮೂಲಕ ಕೌನ್ಸಿಲಿಂಗ್ ಪ್ರಕ್ರಿಯೆ ನಡೆಸಲಾಗುವುದು, ವಿದ್ಯಾರ್ಥಿಗಳ ಮೂಲ ದಾಖಲಾತಿಗಳನ್ನು ಆನ್‌ಲೈನ್ ಮೂಲಕ ಪರಿಶೀಲಿಸಿದ ನಂತರ ವಿದ್ಯಾರ್ಥಿಗಳು ಇಚ್ಚಿಸುವ ಕೋರ್ಸ್ ಮತ್ತು ಕಾಲೇಜುಗಳ ಆಯ್ಕೆಯನ್ನು ಆನ್‌ಲೈನ್‌ನಲ್ಲಿ ನಮೂದಿಸಲು ಅವಕಾಶ ನೀಡಲಾಗುವುದು.

**ವಿಶೇಷಾಧಿಕಾರಿಗಳು**
**ಕರ್ನಾಟಕ ಶುಶ್ರೂಷ ಮತ್ತು ಅರೆವೈದ್ಯಕೀಯ**
**ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ**
**ಬೆಂಗಳೂರು**

KARNATAKA NURSING & PARAMEDICAL SCIENCES EDUCATION (REGULATION) AUTHORITY
ಕರ್ನಾಟಕ ನರ್ಸಿಂಗ್ ಹಾಗೂ ಅರೆ ವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ

PARA MEDICAL BOARD

# 40/20A, Lakshmi Complex, First Floor, Opp. Vani Vilas Hospital, Fort, Bengaluru-560002
**Ph No**: 080-26702159 **Email**: pmboffice97@gmail.com / pmbexamination@gmail.com

PMB/08[Part-I]/22-23 Date: 12.06.2024

## ADMISSION NOTIFICATION FOR PARA MEDICAL COURSE DURING 2024-25 ACADEMIC YEAR

Online Applications are invited from the eligible candidates for admission to the following Para Medical Diploma Courses in **Govt. Medical Colleges & Other Govt Hospitals** and also for **Govt. Quota seats in Private Para Medical Colleges** for the academic year 2024-25.

| Sl No | Name of the Courses |
|---|---|
| 01 | Diploma In Medical Laboratory Technology (DMLT) |
| 02 | Diploma In Medical Imaging Technology (DMIT) |
| 03 | Diploma In Health Inspector(DHI) |
| 04 | Diploma In Medical Records Technology(DMRT) |
| 05 | Diploma In Dialysis Technology(DDT) |
| 06 | Diploma In Operation Theatre and Anesthesia Technology (DOT &AT) |
| 07 | Diploma In Ophthalmic Technology (DOT) |
| 08 | Diploma In Dental Mechanic(DDM) |
| 09 | Diploma In Dental Hygiene(DDH) |

### MINIMUM QUALIFICATION:

| Name of the Course/s | Eligible Qualification |
|---|---|
| DMLT, DMIT, DHI, DMRT, DDT, DOT &AT, DOT, DDM & DDH | SSLC / II PUC (Physics, Chemistry and Biology/Botany/zoology) |
| DMRT | SSLC / II PUC or equivalent examination with Arts/Commerce/PCMC/PCME |

Applicants should have studied **at least 7Years in Karnataka,** from 1st Standard to 10th Standard or PUC

**DURATION OF THE COURSE:** 1) For PUC Candidates: Two (2) years+3months Internship
2) For SSLC Candidates: Three (3) Years +3 months internship

**AGE LIMIT:** Maximum 35 years for General and OBC; for SC/ST and in-service candidates upper age limit is 40years.

**SUBMISSION OF APPLICATION FORMS:** Online Submission of Application is available in Para Medical Board Website (http://www.pmbkarnataka.org). **Copies of all the required documents have to be uploaded along with the application. The Original documents have to be produced at the time of counseling and no candidate will be allowed without study certificate and other original certificates during verification for counseling.**

**APPLICATION FEE:** For General Category Rs. 400/- and SC/ST/Category-I Rs.250/-. The Application fee should be paid through Online only (By only Debit/Credit Cards /Internet Banking)

**DATE FOR SUBMITTING THE APPLICATION:** The online application entry is available from 13-06-2024 to 12-07-2024 **.Offline applications are not entertained.**

**MODE OF SELECTIONS:** Selection of Candidates will be made on the basis of Merit-cum-category wise. Counseling is conducted based on the Direction from the Government & it will be intimated to all the applicants in advance by SMS message. If the Counseling is done off-line, the counseling dates & Place will be notified on the Para Medical Board website and SMS Message will be sent to the candidate mobile number. The counseling will be conducted on-line, after the verification of all the original documents students will allowed to enter the choice of course/college (The same will be intimated to all the applicants in advance)

**Special officer**
**Karnataka Nursing & Para Medical**
**Sciences Education(Regulation) Authority**
**Bangalore.**

**ಪ್ಯಾರಾ ಮೆಡಿಕಲ್ ಬೋರ್ಡ್**

**2024-25 ನೇ ಸಾಲಿನ ಪ್ಯಾರಾ ಮೆಡಿಕಲ್ ಕೋರ್ಸ್‌ಗೆ ಪ್ರವೇಶ ಕೋರಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟಿರುತ್ತಾರೆ.**

1. ಕೊಟ್ಟಿರುವ ಮಾಹಿತಿಯು ಅಪೂರ್ಣವೆಂದು ಕಂಡುಬಂದಲ್ಲಿ ಅಂತಹ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
2. ಕೊಟ್ಟಿರುವ ಮಾಹಿತಿಯು ತಪ್ಪು ಎಂದು ಕಂಡುಬಂದಲ್ಲಿ ಅರ್ಜಿದಾರರ ಪ್ರವೇಶವನ್ನು ತಕ್ಷಣ ರದ್ದುಗೊಳಿಸುವ ಹಕ್ಕು ಪ್ಯಾರಾ ಮೆಡಿಕಲ್ ಬೋರ್ಡ್‌ಗೆ ಇರುತ್ತದೆ.
3. ಎಲ್ಲಾ ಪ್ಯಾರಾ ಮೆಡಿಕಲ್ ಕೋರ್ಸ್‌ಗಳ ಪ್ರವೇಶಕ್ಕೆ ಗರಿಷ್ಠ ವಯೋಮಿತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಸೇವಾನಿರತರಿಗೆ 40ವರ್ಷಗಳು, ಇತರರಿಗೆ 35 ವರ್ಷಗಳು ಮೀರಿರಬಾರದು.
4. ಕೋರ್ಸ್‌ಗಳ ವಿವರ:

    1. ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಜಿ(ಡಿ.ಎಂ.ಎಲ್.ಟಿ)
    2. ಡಿಪ್ಲೋಮಾ ಇನ್ ಮೆಡಿಕಲ್ ಇಮೇಜಿಂಗ್ ಟೆಕ್ನಾಲಜಿ(ಡಿ.ಎಂ.ಐ.ಟಿ)
    3. ಡಿಪ್ಲೋಮಾ ಇನ್ ಹೆಲ್ತ್ ಇನ್ಸ್‌ಪೆಕ್ಟರ್ (ಡಿ.ಹೆಚ್.ಐ)
    4. ಡಿಪ್ಲೋಮಾ ಇನ್ ಮೆಡಿಕಲ್ ರೆಕಾರ್ಡ್ಸ್ ಟೆಕ್ನಾಲಜಿ(ಡಿ.ಎಂ.ಅರ್.ಟಿ)
    5. ಡಿಪ್ಲೋಮಾ ಇನ್ ಡಯಾಲಿಸಿಸ್ ಟೆಕ್ನಾಲಜಿ(ಡಿ.ಡಿ.ಟಿ)
    6. ಡಿಪ್ಲೋಮಾ ಇನ್ ಆಪರೇಷನ್ ಥಿಯೇಟರ್ ಮತ್ತು ಅನಸ್ತೇಶಿಯ ಟೆಕ್ನಾಲಜಿ
    7. ಡಿಪ್ಲೋಮಾ ಇನ್ ಆಪ್ತಾಲ್ಮಿಕ್ ಟೆಕ್ನಾಲಜಿ(ಡಿ.ಓ.ಟಿ)
    8. ಡಿಪ್ಲೋಮಾ ಇನ್ ಡೆಂಟಲ್ ಮೆಕ್ಯಾನಿಕ್(ಡಿ.ಡಿ.ಎಂ)
    9 ಡಿಪ್ಲೋಮಾ ಇನ್ ಡೆಂಟಲ್ ಹೈಜೀನ್(ಡಿ.ಡಿ.ಹೆಚ್)

5. ಆಯ್ಕೆಯು ಸೆಂಟ್ರಲ್ ಕೌನ್ಸಿಲಿಂಗ್ ಮೂಲಕ ನಡೆಯುವುದರಿಂದ ಒಬ್ಬ ಆಭ್ಯರ್ಥಿಯು ಒಂದೇ ಅರ್ಜಿಯನ್ನು ಮಾತ್ರ ಸಲ್ಲಿಸಿ, 09 ಕೋರ್ಸ್‌ಗಳಲ್ಲಿ ಯಾವುದಾದರೊಂದನ್ನು ಆಯ್ಕೆ ಮಾಡಿಕೊಳ್ಳಲು ಕೌನ್ಸಿಲಿಂಗ್‌ನಲ್ಲಿ ಅವಕಾಶವಿರುತ್ತದೆ.
6. ಡಿಪ್ಲೋಮಾ ಇನ್ ಮೆಡಿಕಲ್ ರೆಕಾರ್ಡ್ಸ್ ಹೊರತುಪಡಿಸಿ ಇತರೆ ಎಲ್ಲಾ ಕೋರ್ಸ್‌ಗಳಿಗೂ ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆಯಿರಬೇಕು ಮತ್ತು ವಿಜ್ಞಾನ(Physics, Chemistry & Biology/Zoology/ Botany) ವಿಷಯಗಳಲ್ಲಿ ಅಭ್ಯಾಸ ಮಾಡಿರಬೇಕು. ಇವರಿಗೆ ಕೋರ್ಸ್‌ನ ಅವಧಿ 02 ವರ್ಷ + 03 ತಿಂಗಳು Internship ಗಳಾಗಿರುತ್ತವೆ.
7. ಮೆಡಿಕಲ್ ರೆಕಾರ್ಡ್ಸ್ ಕೋರ್ಸಿಗೆ ದ್ವಿತೀಯ ಪಿಯುಸಿ ಮತ್ತು ಅದಕ್ಕೆ ಸಮಾನಾಂತರ ವಿಧ್ಯಾಭ್ಯಾಸವನ್ನು ಯಾವುದೇ ವಿಷಯವನ್ನು (ಆರ್ಟ್ಸ್ / ಸೈನ್ಸ್(ಆರ್ಟ್ಸ್ / ಸೈನ್ಸ್(PCMC/PCME) /ಕಾಮರ್ಸ್) ತೆಗೆದುಕೊಂಡು ತೇರ್ಗಡೆಯಾಗಿರಬೇಕು. ಇವರಿಗೆ ಕೋರ್ಸ್‌ನ ಅವಧಿ 02 ವರ್ಷ + 03 ತಿಂಗಳು Internship ಗಳಾಗಿರುತ್ತವೆ.
8. ಭಾರತ್ ಇನ್ಸ್‌ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್(ರಿ) ಬೆಂಗಳೂರು, ಇವರಿಂದ ನಡೆಸಲಾಗುತ್ತಿರುವ ಮುಕ್ತ ಶಾಲೆಯಲ್ಲಿನ 10+2 ತರಗತಿಯಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳು ಪ್ಯಾರಾ ಮೆಡಿಕಲ್ ತರಬೇತಿ ಆಯ್ಕೆಗೆ ಅರ್ಹರಿರುತ್ತಾರೆ.
9. ಎಸ್.ಎಸ್.ಎಲ್.ಸಿ ಪಾಸಾದ ಅಭ್ಯರ್ಥಿಗಳು ಎಲ್ಲಾ ಕೋರ್ಸ್‌ಗಳಿಗೂ ಅರ್ಹರಿರುತ್ತಾರೆ. ಇವರಿಗೆ ಕೋರ್ಸ್‌ನ ಅವಧಿ 03 ವರ್ಷ + 03 ತಿಂಗಳು Internship ಗಳಾಗಿರುತ್ತದೆ.

10. ಅರ್ಜಿದಾರರು ಕನಿಷ್ಠ 07 ವರ್ಷ ಕರ್ನಾಟಕದಲ್ಲಿ ವಿದ್ಯಾಭ್ಯಾಸ ಮಾಡಿರಬೇಕು.
11. ಅರ್ಜಿ ಸಲ್ಲಿಸುವಾಗ ಅಭ್ಯರ್ಥಿಯು ಕೆಳಗಿನ ದಾಖಲಾತಿಗಳನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಬೇಕಾಗಿರುತ್ತದೆ.

    i) ಬಿಳಿ ಹಾಳೆಯಲ್ಲಿ ಅಭ್ಯರ್ಥಿಯ ಸಹಿ ಫೈಲ್ JPG Format ನಲ್ಲಿ 20KB ಗಿಂತ ಕಡಿಮೆ ಇರಬೇಕು.
    ii) ಮೂಲ ಅಂಕಪಟ್ಟಿ, ವರ್ಗಾವಣೆ ಪ್ರಮಾಣ ಪತ್ರ, ಮೀಸಲಾತಿ ದೃಢೀಕರಣ ಪತ್ರ ಹಾಗೂ ಹೈದ್ರಾಬಾದ್ ಕರ್ನಾಟಕ ಮೀಸಲಾತಿ ದೃಢೀಕರಣ ಪತ್ರಗಳು JPG Format ನಲ್ಲಿ 200KB ಗಿಂತ ಕಡಿಮೆ ಇರಬೇಕು.
    iii) ಕರ್ನಾಟಕದಲ್ಲಿ 7 ವರ್ಷ ವಿಧ್ಯಾಭ್ಯಾಸ ಮಾಡಿರುವ ಬಗ್ಗೆ ಶಾಲೆ/ಕಾಲೇಜಿನಿಂದ ಪಡೆದ ದೃಢೀಕರಣ ಪತ್ರವನ್ನು PDF Format ನಲ್ಲಿ 20KB ಗಿಂತ ಕಡಿಮೆ ಇರಬೇಕು.

12. ಅರ್ಜಿ ಶುಲ್ಕ : ಸಾಮಾನ್ಯ ಅಭ್ಯರ್ಥಿಗಳಿಗೆ ಪ್ರತಿ ಅರ್ಜಿಗೆ ರೂ.400/- ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ/ಪ್ರವರ್ಗ-1 ರ ಅಭ್ಯರ್ಥಿಗಳಿಗೆ ರೂ.250/- ಅರ್ಜಿ ಶುಲ್ಕವನ್ನು ಕಡ್ಡಾಯವಾಗಿ ಆನ್‌ಲೈನ್ ಮುಖಾಂತರವೇ ಡೆಬಿಟ್/ಕ್ರೆಡಿಟ್ ಕಾರ್ಡ್/ನೆಟ್ ಬ್ಯಾಂಕಿಂಗ್ ಮೂಲಕ ಮಾತ್ರ ಪಾವತಿಸುವುದು.

1. 10. ಕೋರ್ಸ್‌ಗಳಿಗೆ ಪ್ರವೇಶ ಪಡೆದವರು ಪ್ಯಾರಾ ಮೆಡಿಕಲ್ ಬೋರ್ಡ್‌ನ ನಿಯಮಾವಳಿಗಳಿಗೆ ಬದ್ಧರಾಗಿರಬೇಕು.
2. 11. ಅರ್ಹ ಅಭ್ಯರ್ಥಿಗಳಿಗೆ ಮಾತ್ರ ಸಂದರ್ಶನದ /ಕೌನ್ಸಲಿಂಗ್ ತಿಳುವಳಿಕೆ ಸಂದೇಶ ಕಳುಹಿಸಲಾಗುವುದು.

13. ಕೌನ್ಸಲಿಂಗ್‌ಗೆ ಹಾಜರಾಗುವ ಸಮಯದಲ್ಲಿ ಅಭ್ಯರ್ಥಿಗಳು ಎಲ್ಲಾ ದಾಖಲೆಗಳ ಮೂಲ ಪ್ರಮಾಣಪತ್ರಗಳನ್ನು ಸಲ್ಲಿಸುವುದು. ತಪ್ಪಿದಲ್ಲಿ ಕೌನ್ಸಲಿಂಗ್‌ಗೆ ಅವಕಾಶ ನೀಡಲಾಗುವುದಿಲ್ಲ.
14. ಸಂದರ್ಶನದ ಸ್ಥಳ ಮತ್ತು ದಿನಾಂಕವನ್ನು ಮಂಡಳಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.
15. ಕೌನ್ಸಲಿಂಗ್/ಸಂದರ್ಶನಕ್ಕೆ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲೆ ಬರಬೇಕಾಗಿರುತ್ತದೆ.
16. ಅರ್ಜಿ ಸಲ್ಲಿಸಿದ/ಸಂದರ್ಶನಕ್ಕೆ ಬಂದ ಅಭ್ಯರ್ಥಿಗಳಿಗೆ ಕಾಲೇಜ್/ಕೋರ್ಸ್/ಸೀಟ್ ದೊರಕಿಸಿ ಕೊಡುವ ಖಾತ್ರಿಯನ್ನು ಬೋರ್ಡ್ ನೀಡುವುದಿಲ್ಲ.
17. ಸಂದರ್ಶನದ ವೇಳೆಯಲ್ಲಿ ಅಭ್ಯರ್ಥಿಯು ಈ ಕೆಳಕಂಡ ದಾಖಲೆಗಳ ಮೂಲ ಪ್ರತಿಗಳನ್ನು ಹಾಜರುಪಡಿಸಬೇಕು. ತಪ್ಪಿದಲ್ಲಿ ಅಂತಃ ವಿದ್ಯಾರ್ಥಿಗಳ ಆಯ್ಕೆಯನ್ನು ತಿರಸ್ಕರಿಸಲಾಗುವುದು.

    1. ಮೂಲ ಅಂಕಪಟ್ಟಿ (Original Marks Cards)
    2. ವರ್ಗಾವಣೆ ಪ್ರಮಾಣ ಪತ್ರ (Original Transfer Certificate)
    3. ಮೀಸಲಾತಿ ದೃಢೀಕರಣ. (Category Certificate)
    4. 01 ರಿಂದ 10 ನೇ ತರಗತಿ ಅಥವಾ ಪಿಯುಸಿಯವರೆಗೆ ಕನಿಷ್ಠ 07 ವರ್ಷಗಳು ಕರ್ನಾಟಕದಲ್ಲಿ ವಿದ್ಯಾಭ್ಯಾಸ ಮಾಡಿರುವ ಬಗ್ಗೆ ಶಾಲೆ/ಕಾಲೇಜಿನಿಂದ ಪಡೆದ ದೃಢೀಕರಣ ಪತ್ರ.( Original Study Certificate)
    5 ಹೈದ್ರಾಬಾದ್ ಕರ್ನಾಟಕ ಮೀಸಲಾತಿ ದೃಢೀಕರಣ ಪತ್ರ (Not Below the rank of Tahasildar).

18. ಆನ್‌ಲೈನ್ ಮೂಲಕ ಕೌನ್ಸಲಿಂಗ್ ಪ್ರಕ್ರಿಯೆ ನಡೆಸಲಾಗುವುದು, ವಿದ್ಯಾರ್ಥಿಗಳ ಮೂಲ ದಾಖಲಾತಿಗಳನ್ನು ಆನ್‌ಲೈನ್ ಮೂಲಕ ಪರಿಶೀಲಿಸಿ, ನಂತರ ವಿದ್ಯಾರ್ಥಿಗಳು ಇಚ್ಛಿಸುವ ಕೋರ್ಸ್ ಮತ್ತು ಕಾಲೇಜುಗಳ ಆಯ್ಕೆಯನ್ನು ಆನ್‌ಲೈನ್‌ನಲ್ಲಿ ನಮೂದಿಸಲು ಅವಕಾಶ ನೀಡಲಾಗುವುದು.
19. ಆಯ್ಕೆ ಪ್ರಕ್ರಿಯೆ: MERIT-CUM-CATEGORY ಆಧಾರದ ಮೇಲೆ ನಡೆಸಲಾಗುವುದು.
20. ಪಿಯುಸಿ ವಿದ್ಯಾರ್ಥಿಗಳಿಗೆ ಆಯ್ಕೆ ಪ್ರಕ್ರಿಯೆಯಲ್ಲಿ ಮೊದಲ ಆದ್ಯತೆ ನೀಡಲಾಗುವುದು.
21. ಪ್ರವೇಶಾತಿ ಪಡೆದ ವಿದ್ಯಾರ್ಥಿಯು 7 ದಿನಗಳೊಳಗೆ ಕಾಲೇಜುಗಳಲ್ಲಿ ಮೂಲದಾಖಲಾತಿಗಳನ್ನು ಸಲ್ಲಿಸಿ ನೊಂದಣಿ ಮಾಡಿಕೊಳ್ಳಬೇಕು. ಇಲ್ಲವಾದಲ್ಲಿ ಪ್ರವೇಶಾತಿಯನ್ನು ತಿರಸ್ಕರಿಸಲಾಗುವುದು.

**ವಿಶೇಷಾಧಿಕಾರಿಗಳು**
**ಕರ್ನಾಟಕ ಶುಶ್ರೂಷ ಮತ್ತು ಅರೆವೈದ್ಯಕೀಯ**
**ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ**
**ಬೆಂಗಳೂರು**